Grant for Harijan Hostel, Chintamani.

Q.—1033. **Sri J. NARAYANAPPA** (Chintamani—Scheduled Castes).—

Will the Government be pleased to state :—

(*a*) whether they have received any representations from the Harijan leaders praying for grants to run a Harijan Hostel at Chintamani ;

(*b*) if so, whether any correspondence has taken place in the matter ;

(*c*) if so, the stage at which it now stands ?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) Yes.

(*c*) The receipt of a report from the Inspector of Schools, Chintamani, is awaited.

Discussion on Question No. 999 re : Invitations to Khedda operations.

(Fixing time for discussion).

Mr. SPEAKER.—Sri M. Linganna has requested permission to raise a discussion on the subject matter of question No. 999 included in the list of business dated 13th April 1954. The question relates to the issue of invitations to the Khedda operations conducted on 28th December 1953. Under rule 39 (3) I hold that the matter is of sufficient public importance. It will be taken up on Friday, the 16th April 1954 at the conclusion of the business for the day.

RESOLUTIONS

Mr. SPEAKER.—Now Resolutions. Resolution No. 7 stands in the name of Sri Swamidorai ; the member is not present. Resolution No. 8.

ಶ್ರೀ ಎಸ್. ಎಂ. ಮರಿಯಪ್ಪ (ಪೆರಿಯಾಪಟ್ಟಣ).—ದಿವಸಕ್ಕೆ ಎರಡು ನಿರ್ಣಯ ತೆಗೆದುಕೊಂಡರೆ ಕೆಲವಕ್ಕೆ ಮಾತ್ರ ಅವಕಾಶ ದೊರೆಯುತ್ತದೆ, ಉಳಿಯುವುದಕ್ಕೆ ಏನುಮಾಡಬೇಕು ?

ಅಧ್ಯಕ್ಷರು.—ಉಳಿದಿರುವುದು ಲ್ಯಾಪ್ಸ್ ಆಗುತ್ತದೆ.

ಶ್ರೀ ಎಸ್. ಎಂ. ಮರಿಯಪ್ಪ.—ಆದ್ದರಿಂದ ಒಬ್ಬರು ಮಂಡಿಸಿದಮೇಲೆ ಇತರರು ಮಾತನಾಡಲು ಅವಕಾಶ ಕೊಡದಿರುವುದು ಒಳ್ಳೆಯದು.

Mr. SPEAKER.—It is left to you. The other day I suggested the same procedure, but so many were eager to speak and it was not agreed to.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಈಗಿರುವ ಹಾಗೇ ಇರಲಿ.

Mr. SPEAKER.—So, it is understood that the mover will move and the Government will reply ; is it not ?

HON'BLE MEMBERS.—Yes, Sir.

No. 8.—Land grant to landless Non-Gazetted Officers.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ ; ಅದನ್ನು ಮಂಡಿಸುತ್ತೇನೆ.—

> " This Assembly is of the opinion that five acres of land should be granted to each landless Non-Gazetted Officer in the State subject to non-alienation."

ಸ್ವಾಮಿ, ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ನಮ್ಮ ಸಂಸ್ಥಾನದಲ್ಲಿರತಕ್ಕ ನಾನ್-ಗೆಜೆಟೆಡ್ ನೌಕರರಿಗೆ ದೊರೆಯುವ ಸಂಬಳ ಸಾರಿಗೆ ಸಾಕಾಗುತ್ತಿಲ್ಲ, ಜೀವನ ನಡೆಸುವುದು ಕಷ್ಟಕರವಾಗಿದೆ, ಸಂಬಳದ ಸ್ಕೇಲು ಹೆಚ್ಚಿಸಬೇಕು, ಅಲೋಯನ್ಸ್ ಸಂಬಳದ ಜೊತೆಗೆ ಸೇರಿಸಬೇಕು ಎಂದು ಹೀಗೆ ನಾನಾ ರೀತಿಯಲ್ಲಿ ಅವರು ಸರ್ಕಾರದಲ್ಲಿ ಮನವಿ ಮಾಡುತ್ತಾ ಬಂದಿದ್ದಾರೆ. ಆದರೆ ಸರ್ಕಾರಕ್ಕೆ ಅವರ ವಿಚಾರದಲ್ಲಿ ಬಹಳ ಸಹಾನುಭೂತಿಯಿದ್ದರೂ ಕೂಡ ಈಗ ಸದ್ಯದ ಆರ್ಥಿಕ ಪರಿಸ್ಥಿತಿಯಿಂದ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ದೃಷ್ಟಿಯಿಂದ ನಾವು ಯೋಚನೆ ಮಾಡುವುದಾದರೆ ಈಗ ನಮ್ಮ ಸಂಸ್ಥಾನದಲ್ಲಿ ಎಲ್ಲೆಲ್ಲಿ ಜಮೀನು ಸಾಕಾದಷ್ಟು ದೊರೆಯುತ್ತದೆಯೋ ಅಲ್ಲಿ ಜಮೀನಿಲ್ಲದವರಿಗೆ ಸರ್ಕಾರದವರು ಈಗಾಗಲೇ ಕನಿಷ್ಠಪಕ್ಷ 5 ಎಕರೆಯನ್ನಾದರೂ ಕಿಮ್ಮತ್ತಿನ ಮೂಲಕ ಕೊಡಬೇಕೆಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ಅದೇ ರೀತಿ ಜಮೀನಿಲ್ಲದಿರುವ ಸರ್ಕಾರಿ ನೌಕರರಿಗೂ ಕೂಡ ಈ ಒಂದು ನೀತಿಯನ್ನು ಅನುಸರಿಸುವುದಾದರೆ ಅನುಕೂಲ. ಎಷ್ಟೋಜನ ಸರ್ಕಾರಿ ನೌಕರರಿಗೆ ತಮ್ಮ ಸರ್ವಿಸ್ ಅವಧಿಯ ನಂತರ ಅವರಿಗೆ ಬರುವ ಪೆನ್ಷನ್‌ನಿಂದ ಅವರ ಹೆಂಡತಿ ಮಕ್ಕಳೊಡನೆ ಜೀವನ ಮಾಡುವುದು ಕಷ್ಟವಾಗುತ್ತದೆ, ಅಲ್ಲದೆ ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಅವರಿಗೆ ಬರುವ ಸಂಬಳದಲ್ಲಿ ಸಂಸಾರ ನಿರ್ವಹಿಸುವುದು ಕಷ್ಟವಾಗಿದೆ. ಈ ಒಂದು ದೃಷ್ಟಿಯಿಂದ ನೋಡಿದರೆ 5 ಎಕರೆ ಜಮೀನನ್ನು ಅವರು ಯಾವ ಸಂದರ್ಭದಲ್ಲೂ ಸರಭಾರೆ ಮಾಡಕೂಡದೆಂದು ನಿಯಮ ಹಾಕಿಕೊಡುವುದಾದರೆ, ಅವರಿಗೆ ಅದರಿಂದ ಬರುವ ಉತ್ಪತ್ತಿಯಿಂದ ಅಂದರೆ, ಈ ದಿವಸ ಲೆಕ್ಕ ಹಾಕಿದರೆ ವರ್ಷಕ್ಕೆ 125 ರೂಪಾಯಿಗಳ

ವರೆಗೂ ವರಮಾನ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ವಾಗುತ್ತದೆ, ಈಗ ಸರ್ಕಾರದಲ್ಲಿ ಪದೇ ಪದೇ ಬರುವ ಬೇಡಿಕೆಗಳೂ ತಪ್ಪುತ್ತವೆ ಎಂದು ತಿಳಿದುಕೊಂಡಿದ್ದೇನೆ. ಇದೂ ಅಲ್ಲದೆ ಈ ದೃಷ್ಟಿಯಿಂದ ಈ ರೀತಿಯಾಗಿ 5 ಎಕರೆ ಪ್ರದೇಶವನ್ನು ಸರ್ಕಾರಿ ನೌಕರರಿಗೆ ಕೊಟ್ಟರೆ ಅದರಿಂದ ಕಂದಾಯದ ರೂಪದಲ್ಲಿ ವರಮಾನವೂ ಸರ್ಕಾರಕ್ಕೆ ಬರುತ್ತದೆ, ಸರ್ಕಾರದಮೇಲೆ ಹಣಕಾಸಿನ ಹೊರೆಯೂ ಬೀಳುವುದಿಲ್ಲ. ಆ ದೃಷ್ಟಿಯಿಂದ ಈ ನಿರ್ಣಯ ಬಹಳ ಸಾಧುವಾಗಿದೆ. ಸರ್ಕಾರದವರು ಪ್ರತಿಯೊಬ್ಬ ನೌಕರರಿಗೂ ಕೊಡಬೇಕೆಂದು ಸೂಚಿಸಿದ್ದರೂ ಎಲ್ಲೆಲ್ಲಿ ಸಾಧ್ಯವೋ, ಎಷ್ಟು ಜಮೀನು ಕೊಡಲು ಅವಕಾಶವಿದೆಯೋ ಅಲ್ಲಾದರೂ ಕೊಡುವುದಕ್ಕೆ ಒಂದು ತತ್ವವನ್ನು ಹಾಕಿಕೊಂಡು ಇದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತಂದಲ್ಲಿ ಇದರಿಂದ ಸರ್ಕಾರಿ ನೌಕರರಿಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ಕೂಡ ಯಾವ ರೀತಿಯ ಆರ್ಥಿಕ ಹೊರೆಯೂ ಬೀಳುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಈ ನಿರ್ಣಯವನ್ನು ಒಪ್ಪುತ್ತಾರೆ ಮತ್ತು ಈ ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡುತ್ತದೆ ಎಂದು ನಂಬಿ ಈ ನಿರ್ಣಯವನ್ನು ಮಂಡಿಸುತ್ತೇನೆ.

1 P.M.

Mr. SPEAKER.— Resolution moved :

"That this Assembly is of the opinion that five acres of land should be granted to each landless Non-Gazetted Officer in the State subject to non-alienation."

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ನಿರ್ಣಯವನ್ನು ತಂದಿರತಕ್ಕಂಥ ಮಾನ್ಯ ಮಿತ್ರರ ಅಭಿಪ್ರಾಯವಾದರೂ ಹೆಚ್ಚಿನ ಆದಮೇಲೆ ಜೀವನಕ್ಕೆ ದಾರಿ ಆಗಲಿ ಎಂಬ ಉದ್ದೇಶವೆಂದು ಹೇಳಿರುತ್ತಾರೆ. ಇತ್ತೀಚೆಗೆ ಜಮೀನು ಕೊಡಬೇಕಾದರೆ ಯಾವ ದೃಷ್ಟಿಯಿಂದ ಕೊಡಬೇಕು, ಏನು ತತ್ವದಮೇಲೆ ಕೊಡಬೇಕು ಎಂಬ ಅಂಶವನ್ನೊಳಗೊಂಡ ಸರ್ಕಾರಿ ಹುಕುಂ 10-8-1953ರಲ್ಲಿ ಆಗಿದೆ. ಅದರ ಪ್ರಕಾರ ಜಮೀನು ಕೊಡಬೇಕಾದರೆ grantee ಎಂಬುವವನು *bona fide* agriculturist ಆಗಿರಬೇಕು. ಇದು ಮಾನ್ಯ ಮಿತ್ರರಿಗೆ ತಿಳಿದಿರತಕ್ಕುದೇ ಆಗಿದೆ. ಹೀಗಿರುವಲ್ಲಿ ಈ ಪದ್ಧತಿಯ ವಿಚಾರದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಅವಕಾಶವಿಲ್ಲ. ಇದೇ ದೃಷ್ಟಿಯಿಂದಲೇ Cultivation of Fallow Land Act ಎಂಬುದು ಜಾರಿಯಲ್ಲಿರುವುದು. ಆದುದರಿಂದ ಜಮೀನು ಕೊಡುವ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತಿರುವುದರಿಂದ ಈ ನಿರ್ಣಯವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮಾನ್ಯ ಸೂಚಕರು ಇದಕ್ಕೆ ಮನ್ನಣೆಕೊಟ್ಟು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಜಿ. ಬಸಪ್ಪ.—ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave, withdrawn.

No. 11.—Establishment of a Community Project in Bangalore District.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ನನ್ನ ನಿರ್ಣಯವು ಈ ರೀತಿ ಇದೆ; ಅದನ್ನು ಮಂಡಿಸುತ್ತೇನೆ.—

"That this Assembly is of the opinion that out of the Community Projects to be allotted by the Government of India to the Mysore State one Community Project be established in Bangalore District."

ಸ್ವಾಮಿ, ಬೆಂಗಳೂರು ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ ಮತ್ತು ಮಾಗಡಿ ತಾಲ್ಲೂಕುಗಳು ಬಹಳ ಹಿಂದುಳಿದಿವೆ. ಅಲ್ಲಿ ಗ್ರಾಮಾಂತರ ರಸ್ತೆಗಳಾಗಲಿ, ಕೆರೆಗಳಾಗಲಿ ರಿಪೇರಿ ಆಗಿಲ್ಲ. ಯಾವಾಗಲೂ ಮಳೆ ಬೆಳೆಗಳು ಬಹಳ ಕಡಿಮೆಯಾಗಿವೆ. ಅಲ್ಲಿಯ ಜನರೆಲ್ಲ ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ. ಸರ್ಕಾರದವರು ದೊಡ್ಡ ಮನಸ್ಸುಮಾಡಿ ಈ ಮೂರು ತಾಲ್ಲೂಕುಗಳಿಗೆ ಸಂಬಂಧಿಸಿದಹಾಗೆ ಒಂದು ಕಮ್ಯೂನಿಟಿ ಪ್ರಾಜೆಕ್ಟ್ ಏರ್ಪಡಿಸಿ ಈ ಪ್ರದೇಶಗಳನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ನಾನು ಈ ನಿರ್ಣಯವನ್ನು ಸಭೆಯಮುಂದಿಡುತ್ತೇನೆ.

Mr. SPEAKER.— Resolution moved :

"That this Assembly is of the opinion that out of the Community Projects to be allotted by the Government of India to the Mysore State one Community Project be established in Bangalore District."

*ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಸಮಯ ಒದಗಿದಾಗ ತಮ್ಮ ಸಲಹೆಯನ್ನು ಜ್ಞಾಪಕದಲ್ಲಿಟ್ಟುಕೊಂಡು ಯೋಚನೆಮಾಡುತ್ತೇವೆ. ಈ ಭರವಸೆಯ ಮೇಲೆ ಮಾನ್ಯ ಸೂಚಕರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

No. 15.—Supply of Electricity to certain villages of Kadur Taluk.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ನನ್ನ ನಿರ್ಣಯವು ಈ ರೀತಿ ಇದೆ; ಅದನ್ನು ಮಂಡಿಸುತ್ತೇನೆ.—

"That this Assembly is of the opinion that estimates for the supply of electricity to the villages